<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**ಸಿ.ಸಿ. ಸಂಖ್ಯೆ: 773/2024**

**ಸಾಕ್ಷಿಯನ್ನು ದಿಃ 12.05.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**<u>ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ.DRM ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಿಪಿ–1ರ ದೂರಿನಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ. ನಿಪಿ–1 ಅನ್ನು ವೈದ್ಯರು ಬರೆದರು. ಮಹಜರನ್ನು ಪೋಲೀಸರು ಠಾಣೆಯಲ್ಲಿ ಮಾಡಿದ್ದಾರೆ. ಮಹಜರಿಗೆ ನಾನು ಸಹಿ ಹಾಕಿಲ್ಲ. ನಿಪಿ–2ರಲ್ಲಿ

ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ. ಚಾಸಾ-2, ವಿಜಯ್ ಕುಮಾರ್ ಮತ್ತು ಚಂದ್ರ ನನ್ನ ಮಕ್ಕಳು. 1ನೇ ಆರೋಪಿ ಮೇಲೆ ಹೇಳಿದ ನನ್ನ 3 ಜನ ಮಕ್ಕಳ ವಿರುದ್ಧ ಸಿ.ಆರ್ ನಂ 243/2023 ರಂತೆ ದೂರು ಕೊಟ್ಟಿದ್ದರು ಎಂದರೆ ಸರಿ. ಸದರಿ ದೂರಿಗೆ ಪ್ರತಿ ದೂರಾಗಿ ನಾನು ಮತ್ತು ನನ್ನ ಮಕ್ಕಳು ಶಾಮಿಲಾಗಿ ಮರುದಿನ ನಿಪಿ-1ರ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಮೇಲೆ ಹಲ್ಲೆಯಾಗಿದ್ದಲ್ಲಿ ಅದೇ ದಿನ ದೂರು ಕೊಡಲು ತೊಂದರೆ ಇರಲಿಲ್ಲ ಎಂದರೆ ತೊಂದರೆ ಇತ್ತು. ನಮ್ಮ ಮೇಲೆ ಯಾವುದೇ ಹಲ್ಲೆ ಆಗದೇ ಇದ್ದರೂ ಸಹ 1ನೇ ಆರೋಪಿ ಕೊಟ್ಟ ದೂರಿಗೆ ಪ್ರತಿ ದೂರಾಗಿ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ದಿಃ 02.12.2023 ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ಚಾಸಾ-2 ರವರು 1ನೇ ಆರೋಪಿಗೆ ಬೈಕಿನಿಂದ ಗುದ್ದಿ ಕೆಳಕ್ಕೆ ಬೀಳಿಸಿ ಕಾಲಿನಿಂದ ಜಾಡಿಸಿ ಒದ್ದಿದ್ದಾನೆ ಎಂದರೆ ಸರಿಯಲ್ಲ. 1ನೇ ಆರೋಪಿ ಮನೆಯ ಒಳಗೆ ಹೋದರೂ ಕೂಡ ಬಿಡದೇ ಚಾಸಾ-2 ರವರು 1ನೇ ಆರೋಪಿಗೆ ಸೂಳೆ ಮಗ, ಬೋಳಿ ಮಗ ಎಂದು ಬೈದು ಕೊಲೆ ಬೆದರಿಕೆ ಹಾಕಿದ್ದಾರೆ ಎಂದರೆ ಸರಿಯಲ್ಲ. 2ನೇ ಆರೋಪಿ ಬಿಡಿಸಲು ಬಂದಾಗ ಚಾಸಾ-2 ರವರು 2ನೇ ಆರೋಪಿಯನ್ನು ತಳ್ಳಿ ಬೀಳಿಸಿದ್ದಾರೆ ಎಂದರೆ ಸರಿಯಲ್ಲ. ಆಗ 2ನೇ ಆರೋಪಿ ಜ್ಞಾನ ತಪ್ಪಿ ಬಿದ್ದರು ಎಂದರೆ ಸರಿಯಲ್ಲ. 1ನೇ ಆರೋಪಿ 2ನೇ ಆರೋಪಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರೂ ಬಿಡದೇ ಅಲ್ಲಿಯೂ ಕೂಡ ಗಲಾಟೆ ಮಾಡಿದ್ದಾನೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಕೃತ್ಯ ಎಸಗಿಸಿದ್ದರೂ ಸಹ ಅದನ್ನು ಮರೆಮಾಚಲು ನಾನು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ದಾಖಲಿಸಿದ ಪ್ರಕರಣಕ್ಕೆ ತೊಂದರೆ ಕೊಡಲೆಂದು ನಿಪಿ-1 ಮತ್ತು 2ಅನ್ನು ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.